# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

**ಮಂಗಳ ಜ್ಯೋತಿ, ಮಂಗಳೂರು – 575 005**

**ದಿನಾಂಕ: 05.01.2013** **ಸಮಯ : $2^1/_2$ ಘಂಟೆ**

**ತರಗತಿ : VII** **ಅಂಕ : 100**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ **ರಿಜಿಸ್ಟರ್** ನಂಬರ್ ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

## I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ: 10x1=10

1. ಮೌಲ್ಯ ಶಿಕ್ಷಣ ಇತರರೊಂದಿಗೆ ________ ನಡೆದುಕೊಳ್ಳಲು ತಿಳಿಸುತ್ತದೆ.
   (ಬುದ್ದಿವಂತಿಕೆಯಿಂದ; ಮಾನವೀಯತೆಯಿಂದ; ಅಹಂಕಾರದಿಂದ)
2. ಇದು ಹೃದಯದ ಮೌಲ್ಯಕ್ಕೆ ಉದಾಹರಣೆ ________
   (ಸತ್ಯ; ಕರ್ತವ್ಯ; ಪ್ರೀತಿ)
3. ಮಾನವ ಜೀವಿಗಳು ಇತರರ ಬಗ್ಗೆ ________ ಹೊಂದಿರುತ್ತಾರೆ.
   (ಅನುಕಂಪ; ಕೋಪ; ಹೆಮ್ಮೆ)
4. ________ ವ್ಯಕ್ತಿ ಇತರರ ವಸ್ತುಗಳನ್ನು ಗೌರವಿಸುತ್ತಾನೆ.
   (ಪ್ರಾಮಾಣಿಕ; ಅಪ್ರಾಮಾಣಿಕ; ದುರಹಂಕಾರಿ)
5. ಬಿಥೋವನ್‌ಗೆ ಕಿವುಡುತನ ತನ್ನ ________ ತೋರಿಸುವಲ್ಲಿ ತೊಡಕಾಗಲಿಲ್ಲ.
   (ಅಹಂಕಾರ; ಪ್ರತಿಭೆ; ದುರಾಸೆ)
6. ಅಪ್ಪಟ ಚಿನ್ನದ ಕೊಡಲಿ ನೋಡಿದ ಅಪ್ರಾಮಾಣಿಕ ಮರ ಕಡಿಯುವವ ________ ಯಿಂದ ಉದ್ಧರಿಸಿದ.
   (ನಿರಾಶೆ; ದುರಾಸೆ; ಬೇಸರ)
7. ________ ಆಹಾರವನ್ನು ಸೇವಿಸಬಾರದು.
   (ಶುಚಿಯಾದ; ತೆರೆದಿಟ್ಟ; ಪೌಷ್ಟಿಕವಾದ)
8. ಈ ಲೋಕದಲ್ಲಿ ಪ್ರತಿಯೊಬ್ಬರೂ ಸಂತೋಷವನ್ನು ________
   (ದೂರಮಾಡುತ್ತಾರೆ; ಅಪೇಕ್ಷಿಸುತ್ತಾರೆ; ಬಯಸುವುದಿಲ್ಲ)
9. ಸ್ವಾತಂತ್ರ್ಯ ಯಾವಾಗಲೂ ________ ಯನ್ನು ಎದುರು ನೋಡುತ್ತದೆ.
   (ಹೊಣೆಗಾರಿಕೆ; ದುರ್ನಡತೆ; ಅನೀತಿ)
10. ದೈವತ್ವದ ನಂತರ ________ ಗೆ ಪ್ರಧಾನ ಎಂದರು ಜಾನ್ ವೆಸ್ಲಿ.
    (ಹಣಕ್ಕೆ; ನಿರ್ಮಲತೆಗೆ; ಸಂಪತ್ತಿಗೆ)



## II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ : 10x1=10

1. ________ ಶಿಕ್ಷಣವು ಎಲ್ಲಾ ಶಿಕ್ಷಣಕ್ಕಿಂತ ಪ್ರಮುಖವಾದುದು.
2. "ಯಶಸ್ಸಿನ ಮನುಷ್ಯನಾಗಲು ಪ್ರಯತ್ನಿಸಬೇಡ. ಪ್ರತಿಯಾಗಿ ______ ಮಾನವನಾಗು" ಎಂದರು ಆಲ್ಬರ್ಟ್ ಐನ್‌ಸ್ಟೈನ್.
3. ಮಾನವರು ತನ್ನ ಸಹಜೀವಿಗಳ ________ ಪೆಟ್ಟು ಬಿದ್ದಾಗ ಅವರ ಭಾವನೆಗಳು ಕೆರಳುತ್ತವೆ.
4. ಕಾಯಾ, ವಾಚಾ, ಮನಸಾ ಇತರರಿಗೆ ಹಾನಿ ಮಾಡುವವರು________ ಜನರು.
5. ಸಾಕು ನಾಯಿ ಮತ್ತು ಬೀದಿ ನಾಯಿಯ ಕಥೆ ________ದ್ದು ಎಂಬುವುದನ್ನು ತಿಳಿಸುತ್ತದೆ.
6. ಪ್ರಾಮಾಣಿಕ ವ್ಯಕ್ತಿಗಳನ್ನು ______ ಪ್ರೀತಿಸುತ್ತಾರೆ. ಮನುಷ್ಯರು ನಂಬುತ್ತಾರೆ.
7. ಜೀವನದಲ್ಲಿ ______ನ್ನು ತಪ್ಪಿಸಿಕೊಂಡರೆ ಅನೇಕ ವಸ್ತುಗಳನ್ನು ಕಳೆದುಕೊಂಡಂತೆ.
8. ಸ್ವಚ್ಛತೆ ಮಾನವನ ________ ನ್ನು ಸೂಚಿಸುತ್ತದೆ.
9. ಈ ಲೋಕದಲ್ಲಿ ಸಂತೋಷದಿಂದಿದ್ದು ________ ಅಂತೆಯೇ ಇರಬೇಕೆಂದು ದೇವರು ನಮ್ಮನ್ನು ಸೃಷ್ಟಿಸಿದರು.
10. ಒಂದೊಂದು ಕೆಲಸವನ್ನು ಜವಾಬ್ದಾರಿಯಿಂದ ಮಾಡುತ್ತಾ ಇತರರ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳುವುದೇ ________

## III. ಹೊಂದಿಸಿ ಬರೆಯಿರಿ: 5x1=5

| | | |
|---|---|---|
| 1. ಹೃದಯದ ಮೌಲ್ಯ | – | ಕುಟುಂಬದಲ್ಲಿ ಬಂಧಿಸುತ್ತದೆ. |
| 2. ಅಂತರಿಕ ಭಾವನೆ | – | ಸೂಕ್ತ ಸಮಯ ಗುರುತಿಸಬೇಕು |
| 3. ಪ್ರಾಮಾಣಿಕತೆ | – | ಮಾನವನ ಘನತೆ ಸೂಚಿಸುತ್ತದೆ |
| 4. ಕೆಲಸ ಮಾಡಲು | – | ತಕ್ಕ ಸಂಭಾವನೆ ನೀಡುತ್ತದೆ |
| 5. ಸ್ವಚ್ಛತೆ | – | ಗೆಳೆತನ |

## IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ : 5x1=5

1. ಮೌಲ್ಯ ಶಿಕ್ಷಣ ಎಲ್ಲರೂ ಪ್ರೀತಿಸುವಂತ ಒಳ್ಳೆಯ ನಡವಳಿಕೆಯನ್ನು ಕಲಿಯಲು ಸಹಾಯಕ.
2. ಕ್ಷಮೆ ಎಂಬುದು ಮೆದುಳಿನ ಮೌಲ್ಯವಾಗಿದೆ.
3. ನನ್ನ ಸಹಪಾಠಿ ಪರೀಕ್ಷೆಯಲ್ಲಿ ತೇರ್ಗಡೆಯಾಗಬಾರದೆಂದು ಅಪೇಕ್ಷಿಸುವುದು ಸದ್ಗುಣ.
4. ವಿದ್ಯಾರ್ಥಿಗಳು ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.
5. ನಾವು ಸ್ಪರ್ಧೆಯಲ್ಲಿ ಪ್ರಾಮಾಣಿಕರಾಗ್ಗಿರಬೇಕು.

**V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 10x2=20**

1. ಮೌಲ್ಯ ಶಿಕ್ಷಣದ ಯಾವುದಾದರೂ ಎರಡು ಉದ್ದೇಶಗಳನ್ನು ಬರೆ.
2. ಮೌಲ್ಯದ ಎರಡು ಬಗೆಗಳು ಯಾವುವು? ಉದಾಹರಣೆ ಕೊಡು.
3. ಮಾನವ ಜೀವಿಗಳ ಎರಡು ಸ್ವಭಾವಗಳನ್ನು ಬರೆ.
4. ಅವಕಾಶಗಳನ್ನು ಕಳೆದುಕೊಂಡಾಗ ಏನಾಗುತ್ತದೆ?
5. ಒಳ್ಳೆಯ ಜನರೆಂದರೆ ಯಾರು?
6. ನಿನ್ನಲ್ಲಿರುವ ಪ್ರತಿಭೆಗಳನ್ನು ಪಟ್ಟಿ ಮಾಡು.
7. ಲಿಂಕನ್ ಮತ್ತು ಬಿಥೋವನ್ ಹೇಗೆ ಪ್ರಖ್ಯಾತರಾದರು?
8. ಶುದ್ಧವಾಗಿರುವುದೆಂದರೇನು?
9. ನಾವು ಅವಕಾಶಗಳನ್ನು ಏಕೆ ತಪ್ಪಿಸಿಕೊಳ್ಳಬಾರದು?
10. 'ಮೌಲ್ಯ' ಎಂಬ ಪದದ ಅರ್ಥವೇನು?

**VI. ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಏಳು ವಾಕ್ಯಗಳಲ್ಲಿ ಉತ್ತರಿಸಿರಿ: 4x7=28**

1. ಸಮಾಜ ಕಲ್ಯಾಣವನ್ನು ವರ್ಧಿಸುವ ಏಳು ಸದ್ಗುಣಗಳನ್ನು ಬರೆ.
2. ಪ್ರಾಮಾಣಿಕ ಹಾಗೂ ಅಪ್ರಾಮಾಣಿಕ ಮರ ಕಡಿಯುವವರ ಕಥೆಯಿಂದ ಕಲಿಯುವ ನೀತಿಯನ್ನು ವಿವರಿಸಿ ಬರೆ.
3. ನಿನಗೆ ಮೌಲ್ಯ ಶಿಕ್ಷಣ ತರಗತಿಗಳು ಉಪಯುಕ್ತವಾದವೇ? ಹೇಗೆ?
4. ಸಂತೋಷದ ಜೀವನ ನಡೆಸಲು ಜಾನ್ ಪಾವೆಲ್ ಕೊಡುವ ಸಲಹೆಗಳಾವುವು?
5. ಬಡವರಿಗಾಗಿ ಮದರ್ ತೆರೇಸಾರವರು ಮಾಡಿದ ತ್ಯಾಗ ಜೀವನದ ಕುರಿತು ಬರೆ.
6. ನಮ್ಮ ದೇಶದಲ್ಲಿ ಎಲ್ಲರೂ ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆಯೇ? ಏಕೆ?

**VII. ಈ ಕೆಳಗಿನ ಎರಡು ವಿಷಯದ ಕುರಿತು ಟಿಪ್ಪಣಿ ಬರೆಯಿರಿ : 2x5=10**

1. ಆರೋಗ್ಯವು ಒಂದು ದೊಡ್ಡ ಸಂಪತ್ತು
2. ಮೌಲ್ಯ ಶಿಕ್ಷಣದ ಮಹತ್ವ
3. ಪ್ರಾಮಾಣಿಕತೆ
4. ಅವಕಾಶಗಳನ್ನು ಕಳೆದುಕೊಳ್ಳಬಾರದು.



**VIII. ಟಿಪ್ಪಣಿ ಓದಿ, ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ಮಂಜುಳಾ ವಿಧವೆ, ಕೂಲಿ ಕೆಲಸ ಮಾಡಿ ತನ್ನ ಇಬ್ಬರು ಮಕ್ಕಳಿಗೆ ವಿದ್ಯಾಭ್ಯಾಸ ನೀಡಿದಳು. ಅವಳ ಬಡತನ ಎಷ್ಟೆಂದರೆ ಕೆಲವೊಂದು ಸಲ ತಾನು ಉಪವಾಸ ಮಾಡಿ, ಮಕ್ಕಳಿಗೆ ಊಟ ಕೊಡುತ್ತಿದ್ದಳು. ಮಕ್ಕಳ ಭವಿಷ್ಯಕ್ಕಾಗಿ ಹಗಲು–ಇರುಳು ದುಡಿಯುತ್ತಿದ್ದಳು. ಈಗ ಮಂಜುಳಾ ಮುದುಕಿಯಾಗಿದ್ದಾಳೆ. ಅವಳ ಇಬ್ಬರು ಮಕ್ಕಳು ಉತ್ತಮ ಕೆಲಸದಲ್ಲಿದ್ದು, ತಮ್ಮ ಕುಟುಂಬದೊಡನೆ ಸಂತೋಷದಿಂದ ಬಾಳುತ್ತಿದ್ದಾರೆ. "ವೃದ್ಧರ ಸೇವೆ ಮಾಡಲು ನಮಗೆ ಸಮಯವಿಲ್ಲ ಅವರು ನಮ್ಮ ಮಾತು ಕೇಳುವುದಿಲ್ಲ" ಎಂಬ ಕಾರಣ ನೀಡಿ ಮಂಜುಳಾಳನ್ನು ಅವಳ ಮಕ್ಕಳು ವೃದ್ಧಾಶ್ರಮಕ್ಕೆ ಕಳುಹಿಸಿದ್ದಾರೆ.

   **a) i) ಮಂಜುಳಾಳ ಮಕ್ಕಳ ಮನೋಭಾವನೆ ಸರಿಯೇ?**

   **ii) ಏಕೆ?**

   **b) i) ಹೆತ್ತವರನ್ನು ಪ್ರೀತಿಸುವುದು ಮಕ್ಕಳ ಕರ್ತವ್ಯವೇ?**

   **ii) ಏಕೆ?**

   **c) ನೀನು ಮಂಜುಳಾಳ ಮಕ್ಕಳ ಸ್ಥಾನದಲ್ಲಿರುತ್ತಿದ್ದರೆ ಏನು ಮಾಡುತ್ತಿದ್ದಿ? ಎರಡು ಸಲಹೆ ಕೊಡು.**

2. ಚರಣ್ ಪ್ರತಿಭಾವಂತ ವಿದ್ಯಾರ್ಥಿ. ಅವನಿಗೆ ಸಂಗೀತದಲ್ಲಿ, ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ. ಅವನು ಮನೆಯಲ್ಲಿ ಒಬ್ಬನೇ ಸಂಗೀತ ಹಾಡುವನು, ಆಲಿಸುವನು, ಮನೆಯಲ್ಲಿ ವಿವಿಧ ಚಿತ್ರಕಲೆ ಬಿಡಿಸುವನು. ಅಂತೆಯೇ ಕಥೆಪುಸ್ತಕ ಓದುವುದು, ಅಂಚೆಚೀಟಿ ಸಂಗ್ರಹಿಸುವುದು ಅವನ ಹವ್ಯಾಸ. ಆದರೆ ಶಾಲೆಯಲ್ಲಿ ನಡೆಯುವ ಯಾವುದೇ ಪ್ರತಿಭಾ ಸ್ಪರ್ಧೆಗಳಲ್ಲಿ ಅವನು ಭಾಗವಹಿಸಲಾರನು, ಯಾರಿಗೂ ಸಹಾಯ ಕೂಡ ಮಾಡಲಾರನು.

   **a) i) ಚರಣನು ಶಾಲೆಯಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸದಿರುವುದು ಸರಿಯೇ?**

   **ii) ಚರಣ್‌ನಲ್ಲಿರುವ ಪ್ರತಿಭೆಗಳಾವುವು?**

   **b) i) ಚರಣನು ತನ್ನ ಪ್ರತಿಭೆಗಳನ್ನು ಪ್ರದರ್ಶಿಸಬೇಕೇ?**

   **ii) ಏಕೆ?**

   **c) i) ನಿನ್ನಲ್ಲಿರುವ ಪ್ರತಿಭೆಗಳಾವುವು?**

   **ii) ಇತರರ ಪ್ರತಿಭೆಗಳನ್ನು ಪ್ರದರ್ಶಿಸಲು ನೀನು ಹೇಗೆ ಪ್ರೋತ್ಸಾಹಿಸುವೆ?**